# ಎಂಜಿನಿಯರಿಂಗ್ ಹುಡುಗಿಗೆ 'ವಿಲನ್' ಆಗಿ ಮಿಂಚುವಾಸೆ



ದಾವಣಗೆರೆಯ ಹುಡುಗಿ ವಿದ್ಯಾ ಓದಿದ್ದು ಎಂಜಿನಿಯರಿಂಗ್. ತಮ್ಮ ಅಭಿಲಾಷೆಗೂ ಓದಿಗೂ ಒಂದಕ್ಕೊಂದು ತಾಳೆಯಾಗದಿದ್ದರೂ ರಂಗುರಂಗಿನ ನಟನಾ ಲೋಕವೇ ಅವರ ಮನಸ್ಸು ಸೆಳೆದದ್ದು.

ಕಾಲೇಜಿನ ದಿನಗಳಲ್ಲಿ ಹುಟ್ಟಿಕೊಂಡ ನಟನೆಯ ಕನಸಿಗೆ ನೀರೆರೆಯುತ್ತಲೇ ಬಂದ ವಿದ್ಯಾ, ಆಗಲೇ ಹಲವು ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. 'ಮಿಸ್ ದಾವಣಗೆರೆ', 2019ರಲ್ಲಿ 'ಮಿಸ್ ಹಾವೇರಿ', 'ಮಿಸ್ ಶಿವಮೊಗ್ಗ', 2020ರಲ್ಲಿ 'ಮಿಸ್ ಚಿತ್ರದುರ್ಗ', ಹೀಗೆ ಜಿಲ್ಲಾಮಟ್ಟದ ಸೌಂದರ್ಯ ಸ್ಪರ್ಧೆಗಳಲ್ಲಿ ಗೆಲುವು ಸಾಧಿಸಿ ಕಿರುತೆರೆ ಧಾರಾವಾಹಿಯೆಡೆಗೆ ದಾರಿ ಮಾಡಿಕೊಂಡರು. ಇದೀಗ ಸಿನಿಮಾದಲ್ಲಿಯೂ ಅವಕಾಶ ಪಡೆದುಕೊಂಡಿದ್ದಾರೆ.

'ನನ್ನದು ಮೂಲತಃ ದಾವಣಗೆರೆ. ಅವಕಾಶ ಅರಸಿ ಬಂದದ್ದು ಬೆಂಗಳೂರೆಂಬ ಮಹಾನಗರಕ್ಕೆ. ನನ್ನನ್ನು ನಾನು ಟೀವಿಯಲ್ಲಿ ನೋಡಬೇಕೆಂಬ ಆಸೆ ಚಿಕ್ಕವಯಸ್ಸಿನಿಂದಲೇ ಇತ್ತು. ಎಂಜಿನಿಯರಿಂಗ್ ಮಾಡುವಾಗ ನಟಿಸಬೇಕೆಂಬ ಹುಮ್ಮಸ್ಸು ಹುಟ್ಟಿಕೊಂಡಿತ್ತು. ಆದರೆ ಮನೆಯಲ್ಲಿ ಒಂದು ಡಿಗ್ರಿ ಪಡೆಯುವ ತನಕ ಬೇರೆ ಕಡೆ ಗಮನಹರಿಸದಂತೆ ಕಟ್ಟುನಿಟ್ಟು ಮಾಡಿದ್ದರು. ಹಾಗಾಗಿ ಎಂಜಿನಿಯರಿಂಗ್ ಮುಗಿಸಿ ನನ್ನ ಕನಸನ್ನು ಅರಸುತ್ತಿದ್ದೇನೆ' ಎಂದು ತಮ್ಮ ಹಿನ್ನೆಲೆ ವಿವರಿಸುತ್ತಾರೆ.

ಫ್ಯಾಷನ್ ಡಿಸೈನಿಂಗ್‌ನಲ್ಲಿ ಆಸಕ್ತಿಯಿದ್ದ ವಿದ್ಯಾ ಅವರು, ಓದು ಮುಗಿಸಿದ ನಂತರ 6 ತಿಂಗಳು ಕೆಲಸ ಮಾಡಿದರು. ಇನ್‌ಸ್ಟಾಗ್ರಾಂನಲ್ಲಿ ಇನ್‌ಫ್ಲುಯೆನ್ಸರ್ ಆಗಿರುವ ಅವರಿಗೆ ಇದೇ ವೇದಿಕೆ ಅವಕಾಶವೊಂದನ್ನೂ ಕೊಟ್ಟಿತು.

ಸ್ಟಾರ್ ಸುವರ್ಣದ 'ಸುವರ್ಣ ಸೂಪರ್‌ಸ್ಟಾರ್'ನಲ್ಲಿ ಅವಕಾಶ ಅರಸಿಬಂದಿತ್ತು. 'ಕಲಾವಿದೆಯಾಗುವ ಎಲ್ಲಾ ಲಕ್ಷಣಗಳೂ ನಿನ್ನಲ್ಲಿವೆ' ಎಂದು ಅಲ್ಲಿ ಸಿಕ್ಕಿದ ಹೊಗಳಿಕೆ ಹುರುಪು ಹೆಚ್ಚಿಸಿತ್ತು. ಅಲ್ಲಿಂದ ಶುರುವಾದ ಇವರ ಪಯಣ ನಂತರ ತಿರುಗಿದ್ದು 'ಶಾಂತಂ ಪಾಪಂ' ಎಂಬ ಕ್ರೈಂ ಕಾರ್ಯಕ್ರಮದೆಡೆಗೆ. 'ರೆಸಾರ್ಟ್ ಮರ್ಡರ್' ಅಪರಾಧ ಸರಣಿ ಕಾರ್ಯಕ್ರಮದ ಕೆಲವು ಎಪಿಸೋಡ್‌ಗಳಲ್ಲಿ ತೊಡಗಿಸಿಕೊಂಡು ಭಿನ್ನ ಅನುಭವಗಳನ್ನು ತಮ್ಮದಾಗಿಸಿಕೊಂಡರು.

**ಎಂಜಿನಿಯರಿಂಗ್ ಓದಿರುವ ವಿದ್ಯಾ ಅವರಿಗೆ ನಟನೆಯನ್ನೇ ವೃತ್ತಿಯಾಗಿಸಿಕೊಳ್ಳುವ ಅಭಿಲಾಷೆ. ಧಾರಾವಾಹಿಯಲ್ಲಿ ನಟಿಸುತ್ತಾ, ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿರುವ ಅವರು, ಕನ್ನಡ ಚಿತ್ರರಂಗದಲ್ಲಿ ಹೆಚ್ಚು ಅವಕಾಶಗಳನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ.**

ನಂತರ ಕಿರುತೆರೆಯಲ್ಲಿ ಅವಕಾಶದ ಬಾಗಿಲು ತೆರೆದದ್ದು 'ಸಿರಿ ಕನ್ನಡ'ದಲ್ಲಿ ಪ್ರಸಾರವಾಗುವ 'ಅಮರ ಮಧುರ ಪ್ರೇಮ' ಧಾರಾವಾಹಿ ಮೂಲಕ. ಧಾರಾವಾಹಿಗೆ ಆಡಿಷನ್ ನೀಡಿ ಬಂದ ವಿದ್ಯಾ ಭರವಸೆ ಸುಳ್ಳಾಗಲಿಲ್ಲ. ಧಾರಾವಾಹಿಯಲ್ಲಿ ಮುಖ್ಯಪಾತ್ರ ದೊರೆತದ್ದು ಅವರ ಖುಷಿಯನ್ನು ಹೆಚ್ಚಿಸಿತ್ತು. ಆದರೆ ಅವಕಾಶಗಳು ನಮಗೆ ತಕ್ಕಂತೆ ಇರುವುದಿಲ್ಲ ಎನ್ನುವ ವಿದ್ಯಾ, ಅಂಥ ಅವಕಾಶಗಳಿಗಾಗಿ ಪ್ರಯತ್ನ ಮುಂದುವರೆಸಿದ್ದಾರೆ.

'ಕೆಲವೊಮ್ಮೆ ಆಡಿಷನ್‌ಗಳಲ್ಲಿ ಭಾಗವಹಿಸಿದಾಗ, ನಾವು ನಿರೀಕ್ಷಿಸಿದ್ದು ನಡೆಯುವುದಿಲ್ಲ. ಆಗೆಲ್ಲಾ, ನನ್ನ ಓದಿಗೆ ಸಂಬಂಧಿಸಿದ ವೃತ್ತಿ ಮಾಡಬೇಕಿತ್ತು ಎಂದು ಅನಿಸಿಬಿಡುತ್ತದೆ. ಆದರೂ ಭರವಸೆ ಕಳೆದುಕೊಳ್ಳದೆ ನನ್ನ ಪ್ರಯತ್ನ ನಾನು ಮಾಡುತ್ತಲೇ ಇರುತ್ತೇನೆ. ಸ್ಪರ್ಧೆ ಎಲ್ಲಾ ಕಡೆಯೂ ಇದೆ. ಹಾಗೆಂದು ಹಿಂದೆ ಸರಿಯುವುದು ಒಳ್ಳೆ ಲಕ್ಷಣವಲ್ಲ. ನಮ್ಮ ಪ್ರಯತ್ನ ನಾವು ಮಾಡುತ್ತಿದ್ದರೆ ಎಂದಿಗಾದರೂ ಅದು ಕೈ ಹಿಡಿದೇ ಹಿಡಿಯುತ್ತದೆ. ಆ ಭರವಸೆ ನನಗಿದೆ' ಎನ್ನುತ್ತಾರೆ.

'ನಟನಾ ರಂಗದಲ್ಲಿ ಹೀಗೇ ಹೋಗಬೇಕು, ಇದೇ ದಾರಿ ಎಂದು ತೋರುವವರು ಯಾರೂ ಇರಲಿಲ್ಲ. ನಮ್ಮ ದಾರಿಯನ್ನು ನಾವೇ ಸೃಷ್ಟಿಸಿಕೊಳ್ಳಬೇಕು' ಎನ್ನುವ ವಿದ್ಯಾ, ಸದ್ಯ, 'ಮೊಗ್ಗಿನ ಮನಸು' ಸಿನಿಮಾ ನಿರ್ದೇಶಕ ಶಶಾಂಕ್ ಅವರ 'ಕೌಸಲ್ಯಾ ಸುಪ್ರಜಾ ರಾಮ...' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಸಿನಿಮಾ ಚಿತ್ರೀಕರಣ ಮುಗಿದಿದ್ದು, ಎಡಿಟಿಂಗ್ ಕೆಲಸ ನಡೆಯುತ್ತಿದೆ.

'ನನಗೆ ಖಳನಾಯಕಿಯ ಪಾತ್ರ ಮಾಡಬೇಕೆಂದು ತುಂಬಾ ಇಷ್ಟ. ರೋಷಾವೇಶದ ಲುಕ್ ಜೊತೆಗೆ, ಗ್ಲಾಮರಸ್ ಆಗಿ ಕಾಣಿಸಿಕೊಳ್ಳಬೇಕೆಂಬ ಆಸೆ. ಸದ್ಯ, ಧಾರಾವಾಹಿಯಲ್ಲಿ ನೋವುಂಡು ಅಳುವ ಪಾತ್ರ ನನ್ನದು. ಅದನ್ನೂ ಚೆನ್ನಾಗಿ ಪ್ರಯತ್ನಿಸುತ್ತಿದ್ದೇನೆ' ಎಂದು ನಗುತ್ತಾರೆ. ನಟ ಯಶ್ ಅಭಿನಯ ತುಂಬಾ ಇಷ್ಟ ಎಂದು ಹೊಗಳುತ್ತಾ, ಅವರ ಸಿನಿಮಾದಲ್ಲಿ ನಟಿಸುವ ಬಯಕೆ ತಮ್ಮದೆನ್ನುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in